ಕೇಸು ದಾಖಲಿಸಿ ತನಿಖೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

6. ಜಾಗೃತ ದಳವು ಹೆಚ್ಚು ಹೆಚ್ಚು ಪ್ರಕರಣಗಳನ್ನು ಪತ್ತೆ ಹಚ್ಚುವಂತೆ ಪ್ರೋತ್ಸಾಹಿಸಲು ಆಕರ್ಷಕ ಬಹುಮಾನಗಳನ್ನು ಘೋಷಿಸಲಾಗಿದೆ.

ನಗರ ಪ್ರದೇಶ ಹಾಗೂ ಗ್ರಾಮಾಂತರ ಪಡಿತರ ವ್ಯವಸ್ಥೆಯಲ್ಲಿರುವ ಮೂರು ಹಂತದ ಪಡಿತರ ವಿತರಣೆ.

575:(4088)

ಶ್ರೀ ಎ.ನಾರಾಯಣಸ್ವಾಮಿ (ಆನೇಕಲ್): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಮೂರು ಹಂತದ ಪಡಿತರ ವಿತರಣೆ ವ್ಯವಸ್ಥೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಹುತೇಕ ನಗರ ಪ್ರದೇಶದ ಜನತೆಗೆ ಅಥವಾ ಗ್ರಾಮಗಳು ಗ್ರಾಮೀಣ ಪಡಿತರ ವ್ಯವಸ್ಥೆ ಮುಂದುವರೆದಿರುವುದು ಸರ್ಕಾರ ಗಮನಿಸಿದೆಯೇ?

ಇ) ಈ ತಾರತಮ್ಯ ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು.

ಆ) ಬಹುಮಟ್ಟಿಗೆ ಅನೌಪಚಾರಿಕ ಪಡಿತರ ಪ್ರದೇಶ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶ ಎಂಬ ವಿಂಗಡಣೆಗಳಲ್ಲಿ ಪಡಿತರವನ್ನು ನೀಡಲಾಗುತ್ತಿದೆ.

ಇ) ಕಾರ್ಡುಗಳಿಗೆ ಅಕ್ಕಿ ಮತ್ತು ಗೋದಿಯ ವಿತರಣಾ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಸಕ್ಕರೆ ಮತ್ತು ಸೀಮೆಎಣ್ಣೆ ವಿತರಣೆಯ ಪ್ರಮಾಣದಲ್ಲಿ ಗ್ರಾಮಾಂತರ ಮತ್ತು ನಗರ ಜನತೆಯ ಜೀವನ ಶೈಲಿ ತಿಂಡಿ ತಿನಿಸುಗಳನ್ನು ಉಪಯೋಗಿಸುವ ಹಿನ್ನೆಲೆಯ ದೃಷ್ಟಿಯನ್ನಿಟ್ಟುಕೊಂಡು ಸ್ವಲ್ಪ ಮಟ್ಟಿನ ವ್ಯತ್ಯಾಸವಿರುತ್ತದೆ. ಈ ತಾರತಮ್ಯವನ್ನು ಹೋಗಲಾಡಿಸಲು ರಾಜ್ಯ ಸರ್ಕಾರವು ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ, ಸೀಮೆಎಣ್ಣೆ ಬಿಡುಗಡೆ ಮಾಡಲು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಲೇ ಇದೆ. ಇದನ್ನು ಹೋಗಲಾಡಿಸಲು 75,000 ಕಿಲೋ ಲೀಟರ್ ಸೀಮೆಎಣ್ಣೆ ಮತ್ತು 33,770 ಮೆ.ಟನ ಸಕ್ಕರೆ ಅವಶ್ಯಕತೆ ಇದ್ದು, ಈಗ 19, 140 ಮೆ.ಟನ್

ಸಕ್ಕರೆ ಮತ್ತು 56,573 ಕಿಲೋ ಲೀಟರ್ ಸೀಮೆಎಣ್ಣೆಯನ್ನು ಕೇಂದ್ರವು ಬಿಡುಗಡೆ ಮಾಡುತ್ತಿದೆ ಈ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ಕೇಂದ್ರವು ಬಿಡುಗಡೆ ಮಾಡಿದಾಗ ಗ್ರಾಮಾಂತರ ಮತ್ತು ನಗರ ಎಂಬ ಭೇದವಿಲ್ಲದೆ ವಿತರಣೆ ಮಾಡಬಹುದಾಗಿರುತ್ತದೆ.

ಕೆ.ಜಿ.ಎಫ್ ಅನ್ನು ಬೆಳವಣಿಗೆ ಕೇಂದ್ರವೆಂದು ಘೋಷಿಸುವುದು.

576:(4082)

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನರ ಕೆಳಮಟ್ಟದ ಆರ್ಥಿಕ ಸ್ಥಿತಿ ಹಾಗೂ ಭಾರಿ ಗಾತ್ರದ ನಿರುದ್ಯೋಗದ ದೃಷ್ಟಿಯಿಂದ ಕೆ.ಜಿ.ಎಫ್.ನ್ನು 'ಬೆಳವಣಿಗಾ ಕೇಂದ್ರ'ವನ್ನಾಗಿ ಘೋಷಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಶ್ರೀ ಹೆಚ್.ಶಿವಪ್ಪ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲ ಭೂತ ಸೌಲಭ್ಯಗಳ ರಾಜ್ಯ ಸಚಿವರು):

ಅ) ಕೆ.ಜಿ.ಎಫ್.ನ್ನು ಬೆಳವಣಿಗೆ ಕೇಂದ್ರ ಎಂದು ಘೋಷಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ದಿನಾಂಕ 10.11.98ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು.

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹಸಿರು ಮತ್ತು ಕೇಸರಿ ಕಾರ್ಡ್‌ಗಳ ವಿತರಣೆ

2931:(3988)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?